**SC No. 68/2024**
**PW.-29**

## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 68/2024**

| | | |
|---|---|---|
| ಸಾಕ್ಷಿದಾರರ ಹೆಸರು | ಮುಖಂದ | ಪ್ರಮಾಣ ವಚನ ಮಾಡಿದ ದಿನಾಂಕ: 17.11.2025 |
| ತಂದೆಯ/ಗಂಡನ ಹೆಸರು | ರಂಗಣ್ಣ | |
| ವಯಸ್ಸು | 55 ವರ್ಷ | |
| ವೃತ್ತಿ | ಮುಖ್ಯ ಪೇದೆ, ಕವಲಂದೆ ಪೊಲೀಸ್ ಠಾಣೆ | ಫ್ರಾ.ಸಾಃ 29 |
| ವಾಸ ಸ್ಥಳ | ಕವಲಂದೆ | ಚಾ.ಸಾಃ 39 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಕವಲಂದೆ ಪೊಲೀಸ್ ಠಾಣೆಯಲ್ಲಿ ಜೂನ್, *2023* ರಿಂದ ಇಲ್ಲಿಯವರೆಗೂ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ *30.11.2023* ರಂದು ಕವಲಂದೆ ಪೊಲೀಸ್ ಠಾಣೆಯ ಮೊ.ಸಂಖ್ಯೆ *148/2023* ಕಲಂ *302, 354, 504, 114* ಸಹಕಲಂ *34* ಐಪಿಸಿ ಪ್ರಕರಣದಲ್ಲಿ ಮೃತ ಪರಶಿವಪ್ಪ ರವರ ಮೃತ ದೇಹದ ಬೆಂಗಾವಲಿಗೆ ನನ್ನನ್ನು ನೇಮಕ ಮಾಡಿದ್ದು ವೈದ್ಯರಿಗೆ ನೀಡುವ *146* ಮತ್ತು *102* ಮನವಿಯನ್ನು ನೀಡಿದ್ದು ಶವಪರೀಕ್ಷೆ ಮುಗಿದ ನಂತರ ವಾರುಸದಾರರಾದ ಪರಶಿವಪ್ಪ ರವರ ಅಣ್ಣನ ಮಗ ನಾಗೇಂದ್ರ ರವರಿಗೆ ಶವವನ್ನು ಹಸ್ತಾಂತರಿಸಿದ್ದೆ.

ದಿನಾಂಕ *03.12.023* ರಂದು ಮೈಸೂರಿನ ಮಿಶನ್ ಆಸ್ಪತ್ರೆಯಿಂದ ಮೃತರ ಬಾಬ್ತು ಬಟ್ಟೆಗಳನ್ನು ಪಡೆದು ನಂಜನಗೂಡು ವೃತ್ತ ನಿರೀಕ್ಷಕರ ಕಛೇರಿಗೆ ಹಾಜರಾಗಿ ವೃತ್ತ ನಿರೀಕ್ಷಕರ ಮುಂದೆ ಹಾಜರುಪಡಿಸಿದ್ದು ಈ ಬಗ್ಗೆ ಮಹಜರ್ ಕ್ರಮವನ್ನು ಬೆಳಗ್ಗೆ *11.00* ಗಂಟೆಯಿಂದ

*11.45* ಗಂಟೆಯವರೆಗೆ ನಡೆದಿದ್ದು ಆ ವೇಳೆಯಲ್ಲಿ ಪಂಚರಾದ ಮಹದೇವಪ್ಪ ಮತ್ತು ನಾಗಣ್ಣ ರವರು ಹಾಜರಿದ್ದರು. ಬಟ್ಟೆಗಳನ್ನು ಪ್ಯಾಕ್ ಮಾಡಿ ಟಿ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಿದ್ದರು. ನಾನು ಈ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದೆನು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ** :

ನನ್ನನ್ನು ಮೃತ ದೇಹದ ಬೆಂಗಾವಲಿಗೆ ನೇಮಕ ಮಾಡಿದ್ದರು ನಾನು ವೈದ್ಯರಿಗೆ ಮನವಿ ಸಲ್ಲಿಸಿದ್ದೆ ಶವ ಪರೀಕ್ಷೆ ಆದ ನಂತರ ಶವವನ್ನು ಅವರ ವಾರಸುದಾರರಿಗೆ ಹಸ್ತಾಂತರಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೃತನ ಬಟ್ಟೆಗಳನ್ನು ವೃತ್ತ ನಿರೀಕ್ಷಕರ ಮುಂದೆ ಹಾಜರು ಪಡಿಸಿದ್ದೆ ಆ ಬಗ್ಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತಹ ಯಾವುದೇ ಪಂಚರು ಆ ವೇಳೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**